# ಓಹ್.. ಸುಗಂಧ!




ಸೌಂದರ್ಯ. ಆತ್ಮವಿಶ್ವಾಸ ತುಂಬಿ ಮನೋಭಾವ ಬದಲಿಸುವ ಅಗಾಧ ಶಕ್ತಿ ಇದಕ್ಕಿದೆ. ಸಹಜ ಸೌಂದರ್ಯದ ಅದೃಷ್ಟ ಎಲ್ಲರಿಗೂ ಇಲ್ಲ. ಆದರೆ ಇರುವ ಅಂದಕ್ಕೆ ಇಂಬು ನೀಡಿ ಸೆಳೆಯುವಂತಹ ಚುಂಬಕ ಶಕ್ತಿ ನೀಡುವುದು ಸೌಂದರ್ಯವರ್ಧಕ. ಮಾಲಿನ್ಯ, ಧೂಳು, ಹೊಗೆಯಿಂದ ಕಂದಿದ ಸಹಜ ಚೆಲುವಿಗೂ ಕುಂದಣವಿಡುವ ಕೆಲಸ ಅವುಗಳಿಗೆ. ತ್ವಚೆಯ ಹೊಳಪು, ಕೇಶರಾಶಿಯ ನುಣುಪು, ಕಂಗಳ ಬೆಳಕನ್ನು ಇಮ್ಮಡಿ, ಮುಮ್ಮಡಿ ಮಾಡುವ ಸೌಂದರ್ಯವರ್ಧಕಗಳಿಗೇನೂ ಮಾರುಕಟ್ಟೆಯಲ್ಲಿ ಕೊರತೆಯಿಲ್ಲ. ಈ ಸೌಂದರ್ಯವರ್ಧಕಗಳು ಸೌಂದರ್ಯವನ್ನು ತಿದ್ದಿ ತೀಡುವ ಕೆಲಸ ಮಾಡಿದರೆ ಇಡೀ ವ್ಯಕ್ತಿತ್ವಕ್ಕೊಂದು ಮುಕುಟ ನೀಡುವ ಶಕ್ತಿ ಸುಗಂಧ ದ್ರವ್ಯಕ್ಕಿದೆ.

ಮನಕ್ಕೆ ಮುದ ನೀಡಿ ಭಾವನೆಗಳನ್ನು ಅರಳಿಸುವ, ಕೆಲವೊಮ್ಮೆ ಕೆರಳಿಸುವ ಕಿಡಿಗೇಡಿತನ ಈ ಸುವಾಸನೆಗೆ. ಈ ಕಂಪು ಬೀರುವ ವೈವಿಧ್ಯಮಯ ಸುಗಂಧ ದ್ರವ್ಯಗಳ ರಾಶಿಯೇ ಮಾರುಕಟ್ಟೆಗೆ ಲಗ್ಗೆಯಿಟ್ಟಿದೆ. ಸಿಗ್ನೇಚರ್ ಸುಗಂಧಗಳ ಮಹಾಪೂರವೇ ಹರಿಯುತ್ತಿದೆ ಭಾರತೀಯ ಮಾರುಕಟ್ಟೆಯಲ್ಲಿ. ಇದಕ್ಕೆ ಇತ್ತೀಚಿನ ಸೇರ್ಪಡೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಸರುವಾಸಿಯಾದ 'ಸಯನ್'.

ಭಾರತೀಯ ಮೂಲದ ಬ್ರಿಟಿಷ್ ಉದ್ಯಮಿ ಜಯ್ ಶೇಠ್ 2500 ಕೋಟಿ ರೂಪಾಯಿ ಮೌಲ್ಯದ ಭಾರತದ ಸುಗಂಧ ದ್ರವ್ಯ ಮಾರುಕಟ್ಟೆಯ ಶೇ. 5ರಷ್ಟನ್ನು ತಮ್ಮ ಕಂಪೆನಿಯ ಉತ್ಪನ್ನಗಳಿಂದ ತುಂಬಲು ನಿರ್ಧರಿಸಿ ದ್ದು ಭಾರತದಲ್ಲಿ ಈ ಸುಗಂಧದ್ರವ್ಯಗಳನ್ನು ಬಿಡುಗಡೆ ಮಾಡಿದ್ದಾರೆ.

1974ರಲ್ಲೇ ದುಬೈನಲ್ಲಿ ಆರಂಭವಾದ 'ಸಯನ್ ಇಂಟರ್ ನ್ಯಾಷನಲ್' ಕಂಪೆನಿ ದಕ್ಷಿಣ ಆಫ್ರಿಕಾ ಮತ್ತು ಚೆನ್ನೈನಲ್ಲೂ ಉತ್ಪಾದನಾ ಘಟಕಗಳನ್ನು ಹೊಂದಿದ್ದು 70ಕ್ಕೂ ಅಧಿಕ ರಾಷ್ಟ್ರಗಳಲ್ಲಿ ಸೌಂದರ್ಯವರ್ಧಕಗಳು ಮತ್ತು ಸುಗಂಧ ದ್ರವ್ಯಗಳ ಜಾಲ ಹೊಂದಿದೆ. ಯಾರ್ಡ್ಲೆ ಮತ್ತು ವೆಲ್ಲಾ ಕಾಸ್ಮೆಟಿಕ್ಸ್‌ಗೂ ಉತ್ಪನ್ನಗಳನ್ನು ಸರಬರಾಜು ಮಾಡುತ್ತಿರುವ ಹೆಗ್ಗಳಿಕೆ ಕಂಪೆನಿಯದ್ದು.




ಪುರುಷ ಮತ್ತು ಮಹಿಳೆಯರಿಗೆ ಇಷ್ಟವಾಗುವ ಸುವಾಸನಾ ದ್ರವ್ಯಗಳಿವು. 'ಪ್ಯೂರ್ ಬ್ಲ್ಯಾಕ್', 'ಒಪ್ಯುಲೆನ್ಸ್', 'ಡಾರ್ಕ್ ಫೀವರ್', 'ಎಕ್‌ಸ್ಟಾಸಿ', 'ಲೊರೆಂಜೊ ಸ್ಪೋರ್ಟ್ಸ್' ಮೊದಲಾದ ಜನಪ್ರಿಯ ಬ್ರ್ಯಾಂಡ್‌ಗಳ ಕಂಪು ಮೈಮನ ಅರಳಿಸುವಂಥದ್ದು. ಮೊದಲು ಸ್ಪ್ರೇ ಮಾಡಿದಾಗ ಕಟು ಎನಿಸಿದರೂ ಕೆಲವೇ ಕ್ಷಣಗಳಲ್ಲಿ ಹಿತ ಎನಿಸುವ ಪರಿಮಳ. ಮನದ ತುಂಬಾ ನವಿರಾದ ಕನಸುಗಳನ್ನು ತುಂಬುವ ಸುವಾಸನೆ.

'ಸುವಾಸನಾ ದ್ರವ್ಯಗಳಲ್ಲಿ ಅಪಾಯಕಾರಿ ರಾಸಾಯನಿಕ ಬಳಸಿಲ್ಲ. ಕಂಪೆನಿ ತನ್ನದೇ ಆದ ಸಂಶೋಧನ ಮತ್ತು ಅಭಿವೃದ್ಧಿ ವಿಭಾಗ ಹೊಂದಿದ್ದು ಚರ್ಮತಜ್ಞರು ಪ್ರಯೋಗ ಮಾಡಿ ಶಿಫಾರಸ್ಸು ಮಾಡಿದ ನಂತರವೇ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು' ಎನ್ನುವ ಕಂಪೆನಿಯ ಮಾಲೀಕ ಜಯ್, '800ಕ್ಕೂ ಅಧಿಕ ಪರಿಮಳಗಳಲ್ಲಿ ಈ ಸುಗಂಧ ದ್ರವ್ಯಗಳು ಲಭ್ಯ' ಎನ್ನುತ್ತಾರೆ.

ಕೇವಲ ಸುಗಂಧ ದ್ರವ್ಯಗಳು ಮಾತ್ರವಲ್ಲ, ಬಾಡಿಸ್ಪ್ರೇಗಳನ್ನೂ ಕಂಪೆನಿ ಹೊರತಂದಿದೆ. ಜೊತೆಗೆ ಕಾಸ್ಮೆಟಿಕ್ಸ್. 3500ಕ್ಕೂ ಅಧಿಕ ವರ್ಣಗಳಲ್ಲಿ ಮಿನುಗುವ ಉಗುರಿನ ಪಾಲಿಷ್. ತ್ವಚೆ ಹಾಗೂ ಕೇಶ ಸೌಂದರ್ಯ ಕಾಪಾಡುವ ಉತ್ಪನ್ನಗಳು.

ಜರ್ಮನಿ ಮತ್ತು ಅಮೆರಿಕದಲ್ಲಿ ಹೆಚ್ಚು ಚಿಲ್ಲರೆ ಮಾರಾಟಗಾರರನ್ನು ಹೊಂದಿರುವ ಕಂಪೆನಿಯ ಉತ್ಪನ್ನಗಳು ಭಾರತದಲ್ಲಿ ಇದುವರೆಗೆ ದುಬೈನಿಂದ ಪೂರೈಕೆಯಾಗುತ್ತಿದ್ದವು. ಇದೀಗ ವ್ಯವಸ್ಥಿತ ಮಾರಾಟ ಜಾಲ ಶುರು ಮಾಡಿರುವ ಸಯನ್ ಕಂಪೆನಿ ಭಾರತದ ಎಲ್ಲಾ ಕಡೆ ಈ ಉತ್ಪನ್ನಗಳನ್ನು ಜನಪ್ರಿಯಗೊಳಿಸಲು ಹೊರಟಿದೆ.

■ ಎಸ್ಸೆಚ್

